ಲಲಿತ ಮಂಟಪ

# ನಾನು ಹಸಿವಿನ ಬೆನ್ನು ಬಿದ್ದವನು

## ಸೂರಿಕುಮೇರು ಗೋವಿಂದ ಭಟ್ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಚಿತ್ರಗಳು: ಮಧುಸೂದನ ಅಲೆವೂರಾಯ

ಯಕ್ಷಗಾನ ಕ್ಷೇತ್ರದಲ್ಲಿ ಸೌಕರ್ಯಗಳ ವೈಭವವು ಇನ್ನೂ ಕಾಲಿಡದ ಸಂದರ್ಭದಲ್ಲಿ ತಮ್ಮ ವಿದ್ವತ್ ಶ್ರೀಮಂತಿಕೆಯಿಂದ ರಂಗಸ್ಥಳದಲ್ಲಿ ವಿಜೃಂಭಿಸಿದವರು ಸೂರಿಕುಮೇರು ಕೆ. ಗೋವಿಂದ ಭಟ್. ಕುರಿಯ ವಿಠಲ ಶಾಸ್ತ್ರಿ, ಬಲಿಪ ನಾರಾಯಣ ಭಾಗವತರಿಂದ ಯಕ್ಷಗಾನದ ಮೂಲ ಪಾಠ ಕಲಿತು, ಪರಮಶಿವನ್, ಮಾಧವ ಮೆನನ್, ರಾಜನ್ ಅಯ್ಯರ್ ಅವರಿಂದ ಭರತನಾಟ್ಯದ ಹೆಜ್ಜೆಗಳನ್ನು ಕಲಿತು, ಯಕ್ಷಗಾನ ಕ್ಷೇತ್ರದ ಸಾಧ್ಯತೆಗಳನ್ನು ವಿಸ್ತರಿಸಿದವರು. 1951ರಲ್ಲಿ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ ಅವರಿಂದ ಗೆಜ್ಜೆ ಪಡೆದು ರಂಗಸ್ಥಳವೇರಿದ ಅವರು, ನಿರಂತರ ಎಪ್ಪತ್ತು ವರ್ಷಗಳ ಕಾಲ ತಿರುಗಾಟ ನಡೆಸಿ 2020ರಲ್ಲಿ ಗೆಜ್ಜೆಯನ್ನು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಒಪ್ಪಿಸುವ ಮೂಲಕ ನಿವೃತ್ತಿ ಪಡೆದರು. ಅವರ ವೃತ್ತಿಜೀವನವು ಧರ್ಮಸ್ಥಳ ಕೃಪಾಪೋಷಿತ ಯಕ್ಷಗಾನ ಮಂಡಳಿ, ಇರಾ ಸೋಮನಾಥೇಶ್ವರ ಮೇಳ, ಸುರತ್ಕಲ್ ಹಳೆ ಮಾರಿಗುಡಿ ಮೇಳ, ಮೂಲ್ಕಿ ಮೇಳ, ಕೂಡ್ಲು ಮೇಳಗಳಲ್ಲಿ ನಡೆಯಿತು. ಧರ್ಮಸ್ಥಳದ ಯಕ್ಷಗಾನ ಕಲಾಕೇಂದ್ರದಲ್ಲಿ ಗುರುಗಳಾಗಿ, ಯಕ್ಷಗಾನಕ್ಕೆ ಪಠ್ಯಪುಸ್ತಕವನ್ನು ಸಿದ್ಧಪಡಿಸುವಲ್ಲಿ ಪ್ರಧಾನ ಸೂತ್ರಧಾರಿಯಾಗಿ ಕೆಲಸ ಮಾಡಿದ ಅವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಸಾಧನಾ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಸಂದಿವೆ. ಎಪ್ಪತ್ತು ವರ್ಷಗಳ ತಿರುಗಾಟದ ಬಳಿಕ ಇದೀಗ ನಿವೃತ್ತ ಜೀವನ ನಡೆಸುತ್ತಿರುವ ಅವರು 'ಮಯೂರ'ದ ಜೊತೆ ನಡೆಸಿದ ಮಾತುಕತೆಯ ಆಯ್ದ ಭಾಗಗಳು ಇಲ್ಲಿವೆ.